**S.C. No.** 270/2019

**ಪಿ.ಡಬ್ಲ್ಯೂ-17**

**ಸಾಕ್ಷಿಯನ್ನು ದಿನಾಂಕ 20.12.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎಸ್ ವಕೀಲರಿಂದಃ</u>**

ಘಟನೆ ಬಗ್ಗೆ ಠಾಣೆಗೆ ಫೋನ್ ಮಾಡಿ ಮಾಹಿತಿ ನೀಡಿರುತ್ತಾರೆ. ಆದರೆ ಯಾರು ಮಾಹಿತಿ ನೀಡಿರುತ್ತಾರೆ ಎಂದು ಗೊತ್ತಿಲ್ಲ. ನನಗೆ ಘಟನೆ ಸ್ಥಳಕ್ಕೆ ಹೋಗುವ ಮೊದಲು ಯಾರು ಮಾಹಿತಿ ನೀಡಿರುತ್ತಾರೆ ಎಂದು ಈಗ ನಿಖರವಾಗಿ ಹೇಳಲಾಗುವುದಿಲ್ಲ. ಘಟನೆ ಬಗ್ಗೆ ಗೊತ್ತಾಗಿ ನಾನು ನೇರವಾಗಿ ಸ್ಥಳಕ್ಕೆ ಹೋಗಿರುತ್ತೇನೆ. ಘಟನೆ ಸ್ಥಳದ ಅಕ್ಕಪಕ್ಕ ಮತ್ತು ಎದುರಿಗೆ ಬೇರೆ ಮನೆಗಳಿವೆ ಎಂದರೆ ನಿಜ. ಆ ಕಾಲೋನಿಯ ಮನೆಗಳನ್ನು ಪೌರಕಾರ್ಮಿಕರಿಗೆ ಕಟ್ಟಿರುತ್ತಾರೆ ಎಂದರೆ ನಿಜ. ನಾನು ಘಟನೆ ಸ್ಥಳಕ್ಕೆ ಹೋಗುವ ಮೊದಲೇ ಪಿರ್ಯಾದನ್ನು ತಯಾರಿಸಿಟ್ಟುಕೊಂಡಿದ್ದರು. ನಾನು ಮಾಹಿತಿ ಬಂದ ಕೂಡಲೇ ಆ ಸ್ಥಳಕ್ಕೆ ಹೋಗಿದ್ದೆ. ಪಿರ್ಯಾದನ್ನು ಎಲ್ಲಿ ತಯಾರಿಸಿದ್ದರು ಎಂದು ಗೊತ್ತಿಲ್ಲ. ಘಟನೆ ಕಾಲಕ್ಕೆ ಆರೋಪಿ ಆ ಸ್ಥಳದಲ್ಲಿದ್ದ ಬಗ್ಗೆ ಸಾಕ್ಷಿಗಳು ಹೇಳಿಕೆ ನೀಡಿರುತ್ತಾರೆ. ಅದನ್ನು ದೂರುದಾರರು ಹೇಳಿದ್ದಾರೆ. ಆ ಮನೆಯ ಅಕ್ಕಪಕ್ಕದವರು ಆ ಬಗ್ಗೆ ಹೇಳಿಕೆ ನೀಡಿಲ್ಲ. ಈ ಪ್ರಕರಣದಲ್ಲಿ ಪ್ರತ್ಯಕ್ಷ ಸಾಕ್ಷಿಗಳು ಇಲ್ಲ ಎಂದರೆ ನಿಜ. ಪಿರ್ಯಾದನ್ನು ಪಿ.ಸಿ 742 ಇವರ ಮೂಲಕ ಠಾಣೆಗೆ ಕಳುಹಿಸಿದ್ದೆ. ಎಫ್.ಐ.ಆರ್ ಅನ್ನು ದಾಖಲಿಸಿ ಕಡತವನ್ನು ನನಗೆ ನೀಡುವಷ್ಟರಲ್ಲಿ ಅರ್ಧ ಗಂಟೆಯಾಗಿತ್ತು. ಆ 30 ನಿಮಿಷದ ಅವಧಿಯಲ್ಲಿ ಅಕ್ಕಪಕ್ಕದವರನ್ನು ವಿಚಾರಿಸಿದ್ದೆ, ಆದರೆ ಯಾವುದೇ ಹೇಳಿಕೆ ಪಡೆದಿಲ್ಲ. ಸ್ಥಳಕ್ಕೆ ಹೋದಾಗ ನನಗೆ ಆರೋಪಿಯ

ಪೋನ್ ನಂಬರ್ ಸಿಕ್ಕಿರುವುದಿಲ್ಲ. ಸ್ಥಳದಲ್ಲಿದ್ದ ವ್ಯಕ್ತಿಗಳನ್ನು ಶವ ಪಂಚನಾಮೆಗೆ ಸಾಕ್ಷಿಯಾಗಿ ಕರೆದಿದ್ದೆ. ಮದ್ಯಾಹ್ನ 2.20 ಕ್ಕೆ ನಾನು ಘಟನೆ ಸ್ಥಳಕ್ಕೆ ಹೋಗಿದ್ದೆ. ಅದೇ ದಿನ ಸಂಜೆ 5.20 ರಿಂದ 6 ಗಂಟೆವರೆಗೆ ಸ್ಥಳ ಪಂಚನಾಮೆ ಮಾಡಿರುತ್ತೇನೆ. ಸ್ಥಳ ಮಹಜರ್ ಕಾಲಕ್ಕೆ ರಕ್ತದ ಸ್ಯಾಂಪಲ್ ಪಡೆದಿರುತ್ತೇನೆ. ಚಾಸ 10 ರಿಂದ 14 ರವರ ಹೇಳಿಕೆಗಳನ್ನು ಘಟನ ಸ್ಥಳದಲ್ಲಿ ಮಾಡಿರುತ್ತೇನೆ. ಅದೇ ದಿನ ಚಾಸ 18 ಮತ್ತು 19 ರವರನ್ನು ಆರೋಪಿತನ ಪತ್ತೆಗಾಗಿ ನೇಮಿಸಿದ್ದೆ. ಅವರನ್ನು ನೇಮಿಸಿದ ಬಗ್ಗೆ ಮೌಖಿಕ ಆದೇಶ ಮಾಡಿದ್ದೆ, ಆದರೆ ಲಿಖಿತವಾಗಿ ನೀಡಿಲ್ಲ. ಘಟನೆ ನೆಡದ ಬಳಿಕ ಆರೋಪಿ ಆ ಸ್ಥಳಕ್ಕೆ ಬಂದಿದ್ದ ಎಂದು ಆ ಕಾಲಕ್ಕೆ ನನಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ. ಆ ಕಾಲಕ್ಕೆ ಮೃತಳ ತಂದೆ ತಾಯಿ ಹಾಗೂ ಸಂಬಂಧಿಕರು ಆರೋಪಿಗೆ ಹಲ್ಲೆ ಮಾಡಿದ್ದರು ಎಂದರೆ ಸರಿಯಲ್ಲ. ಘಟನೆ ಹಿಂದಿನ ದಿನ ರಾತ್ರಿ ಆರೋಪಿಯು ಪಿರ್ಯಾದಿಯ ಮನೆಯಲ್ಲಿದ್ದ ಎಂದರೆ ಸರಿಯಲ್ಲ. ದಿನಾಂಕ 1.8.2019 ರಂದು ಚಾಸ 18 ಮತ್ತು 19 ರವರು ಆರೋಪಿಯನ್ನು ರಿಂಗ್ ರಸ್ತೆಯಲ್ಲಿ ವಶಕ್ಕೆ ಪಡೆದು ನನ್ನ ಮುಂದೆ ಹಾಜರುಪಡಿಸಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಸ್ವಇಚ್ಛಾ ಹೇಳಿಕೆಯನ್ನು ನಾನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಚಾಕು ಎಸೆದಿದ್ದ ಸ್ಥಳ ಸರ್ಕಾರಿ ಅತಿಥಿಗೃಹಕ್ಕೆ ಹೋಗುವ ರಸ್ತೆಯಲ್ಲಿದೆ. ಆಗಸ್ಟನಲ್ಲಿ ಸಾಮಾನ್ಯವಾಗಿ ಮಳೆಗಾಲ ಎಂದರೆ ಇರಬಹುದು. ನಿಪಿ10 ಮತ್ತು 11 ಪೋಟೊಗಳನ್ನು ಇಲಾಖಾ ಕ್ಯಾಮಾರದಿಂದ ನಮ್ಮ ಸಿಬ್ಬಂದಿ ತೆಗೆದಿರುತ್ತಾರೆ. ಆ ಪೋಟೊಗಳನ್ನು ಯಾರು ತೆಗೆದಿದ್ದಾರೆ ಎಂದು ನೆನಪಿಲ್ಲ. ಅದನ್ನು ಸ್ಟುಡಿಯೋದಲ್ಲಿ ಪ್ರಿಂಟ್ ಮಾಡಿಸಲಾಗಿದೆ. ಪೋಟೋಗಳನ್ನು ತೆಗೆದವರು ಮತ್ತು ಪ್ರಿಂಟ್ ಮಾಡಿದವರಿಂದ ಕಲಂ 65 ಬಿ ಪ್ರಮಾಣಪತ್ರ ಪಡೆದಿಲ್ಲ. ಮೃತಳೊಂದಿಗೆ ಆರೋಪಿತನ ತಮ್ಮನಿಗೆ ಅಕ್ರಮ ಸಂಬಂಧ ಇತ್ತು ಎಂಬ ಬಗ್ಗೆ ಯಾರೂ ಸಹ ಹೇಳಿಕೆ ನೀಡಿಲ್ಲ. ಘಟನೆಗಿಂತ 3 ದಿನ ಮೊದಲು ಮೃತಳು ಎಂ.ಸಿ.ಸಿ ಕಾಲೋನಿಗೆ ವಾಸಕ್ಕೆ ಬಂದಿದ್ದಳು

ಎಂದರೆ ನಿಜ. ಎಂ.ಸಿ.ಸಿ ಕಾಲೋನಿಗೆ ಹೋಗುವ ಮೊದಲು ಮೃತಳು ಪಿರ್ಯಾದಿಯ ಮನೆ ಹಿಂದಿನ ಮನೆಯಲ್ಲಿ ವಾಸವಾಗಿದ್ದಳು ಎಂದರೆ ನಿಜ. ಆ ಮನೆಯ ಅಕ್ಕಪಕ್ಕದಲ್ಲಿ ಬೇರೆ ವಾಸದ ಮನೆಗಳಿವೆ ಎಂದರೆ ಗೊತ್ತಿಲ್ಲ. ತನಿಖಾ ದಾಖಲೆಗಳ ಪ್ರಕಾರ ಆರೋಪಿ ತನ್ನ ತಮ್ಮನೊಂದಿಗೆ ಮೃತಳು ಸಂಬಂಧ ಇಟ್ಟುಕೊಂಡಿದ್ದಾಳೆ ಎಂದು ಹೊಡೆಯುತ್ತಿದ್ದ ಬಗ್ಗೆ ದಾಖಲೆಗಳಲ್ಲಿ ನಮೂದಿದೆ ಎಂದರೆ ನಿಜ. ಆ ವಿಚಾರಕ್ಕೆ ಅಕ್ಕಪಕ್ಕದವರನ್ನು ವಿಚಾರಿಸಿಲ್ಲ. ಆರೋಪಿಯು ಘಟನ ಕಾಲಕ್ಕೆ ಧರಿಸಿದ್ದ ಬಟ್ಟೆಗಳನ್ನು ತನಿಖಾ ಕಾಲದಲ್ಲಿ ಅಮಾನತ್ತುಪಡಿಸಿಕೊಂಡಿಲ್ಲ. ಆರೋಪಿ ಅವುಗಳನ್ನು ಹೊಳೆಗೆ ಬೀಸಾಕಿದ್ದಾಗಿ ತಿಳಿಸಿದ್ದ. ಆ ಹೊಳೆ ಬಳಿ ನಾನು ಮಹಜರ್ ಮಾಡಿಲ್ಲ. ಎಂ.ಸಿ.ಸಿ ಕಾಲೋನಿಯ ಘಟನೆ ಸ್ಥಳದ ಅಕ್ಕಪಕ್ಕದಲ್ಲಿ ಬೇರೆ ಮನೆಗಳಿವೆ ಎಂದರೆ ನಿಜ. ಚಾಸ 11 ರಿಂದ 14 ನನ್ನ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಫ್ರಾಸ 11 ಮತ್ತು 12 ರವರು ನನ್ನ ಮುಂದೆ ನಿಪಿ12 ಮತ್ತು 13 ರಂತೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ10 ಮತ್ತು 11 ನ್ನು ಪ್ರಿಂಟ್ ಮಾಡಿದ ಬಗ್ಗೆ ಕಲಂ 65 ಬಿ ಪ್ರಮಾಣಪತ್ರ ನೀಡಿಲ್ಲ ಎಂದರೆ ನಿಜ. ತನಿಖೆ ಕಾಲಕ್ಕೆ ಮೃತಳ ಕೊಲೆಯನ್ನು ಆರೋಪಿ ಮಾಡಿಲ್ಲ ಎಂದು ಕಂಡು ಬಂದರೂ ಸಹ ಪಿರ್ಯಾದುದಾರರ ಒತ್ತಡಕ್ಕೆ ಮಣಿದು ಆರೋಪಿಯ ವಿರುದ್ಧ ಆರೋಪ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ನಿಪಿ21 ರಂತೆ ಸ್ವಇಚ್ಛಾ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿ ತೋರಿಸಿದ ಚಾಕುವನ್ನು ಅಮಾನತ್ತುಪಡಿಸಿಕೊಂಡು ನಿಪಿ9 ರಂತೆ ಪಂಚನಾಮೆ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಲಂ 164 ಹೇಳಿಕೆ ಪಡೆಯುವ ದಿನ ಚಾಸ 10 ಮತ್ತು 11 ರವರನ್ನು ಠಾಣೆಗೆ ಕರೆಸಿದ್ದೆ ಎಂದರೆ ಸರಿಯಲ್ಲ. ಅವರಿಗೆ ನಾನು ಮತ್ತು ಪಿರ್ಯಾದುದಾರರು ಏನೇನು ಹೇಳಬೇಕೆಂದು ಹೇಳಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಘಟನೆ ಬಳಿಕ ಆರೋಪಿ ಆ ಸ್ಥಳಕ್ಕೆ ಬಂದಾಗ ಮೃತಳ ತಂದೆ ತಾಯಿ

ಮತ್ತು ಸಂಬಂಧಿಕರು ಆರೋಪಿಗೆ ಹೊಡೆದಿದ್ದರಿಂದ ಅವನು ಹೆದರಿ ಅಲ್ಲಿಂದ ಹೋಗಿದ್ದ ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ಆರೋಪಿ ನಮಗೆ ಸಿಕ್ಕಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ತಪ್ಪಿಸಿಕೊಂಡು ಹೋಗಿದ್ದ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ದಿನಾಂಕ 1.8.2019 ರಂದು ರಿಂಗ್ ರಸ್ತೆಯಿಂದ ಕರೆದುಕೊಂಡು ಬಂದಿಲ್ಲ ಎಂದರೆ ಸರಿಯಲ್ಲ. ದಿನಾಂಕ 1.8.2019 ಕ್ಕಿಂತ 3 ದಿನಗಳ ಮುಂಚಿನಿಂದಲೂ ಆರೋಪಿ ಠಾಣೆಯಲ್ಲಿದ್ದ ಎಂದರೆ ಸರಿಯಲ್ಲ. ಆರೋಪಿ ಕೊಲೆ ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು